ಅಸಲು ದಾವಾ ಸಂಖ್ಯೆ **110/2020** ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **22.01.2025**

ಮುಂದುವರಿದ ಪಾಟೀ ಸವಾಲು ಶ್ರೀ **MEH** ಪ್ರತಿವಾದಿ ಪರ ನ್ಯಾಯಾವಾದಿಗಳಿಂದ ದಾವಾ ಆಸ್ತಿಯು ರತ್ನಮ್ಮನವರಿಗೆ ಅವರ ಗಂಡನಿಂದ ಬಂದಿರುತ್ತದೆ. ಸದರಿ ರತ್ನಮ್ಮನವರ ಗಂಡ ಕಾಣೆಯಾಗಿದ್ದಾರೆ ಹಾಗಾಗಿ ಅವರು ಮೃತ ಪಟ್ಟಿರುವುದಾಗಿ ಘೋಷಿಸುವಂತೆ ಸಿವಿಲ್ ನ್ಯಾಯಾಲಯ ನಾಗಮಂಗದಲ್ಲಿ ದಾವೆಯನ್ನು ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ. ನಾವು ಕ್ರಯಕ್ಕೆ ಪಡೆಯುವಾಗಿ ರತ್ನಮ್ಮನವರು ಅವರ ಗಂಡ ಮೃತರಾಗಿರುವುದಾಗಿ ಹೇಳಿದ್ದರು. ದಾವಾ ಆಸ್ತಿಯು ರತ್ನಮ್ಮನವರಿಗೆ ಅವರ ಗಂಡನಿಂದ ಪೌತಿ ವಾರಸ್ಸು ಮೇರೆಗೆ ಬಂದಿರುತ್ತದೆ. ಕ್ರಯಕ್ಕೆ ಪಡೆಯುವಾಗ ದಾವಾ ಆಸ್ತಿಯ ಅಲಿನೆಷನ್ ಪ್ರತಿಯನ್ನು ನೋಡಿರುತ್ತೇನೆ. ರತ್ನಮ್ಮನವರ ಗಂಡನ ಹೆಸರಿನಲ್ಲಿರುವ ಕ್ರಯ ಪತ್ರವನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ರತ್ನಮ್ಮನವರ ಹೆಸರಿನಲ್ಲಿದ್ದ ಕ್ರಯ ಪತ್ರವನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ರತ್ನಮ್ಮನವರು ದಾವಾ ಆಸ್ತಿಯನ್ನು ಯಾರಿಂದ ಕ್ರಯಕ್ಕೆ ಪಡೆದಿದ್ದರು ಎಂದು ನಾನು ತಿಳಿಕೊಂಡಿರುವುದಿಲ್ಲ.

2.ಅಸಲು ದಾವಾ ಸಂಖ್ಯೆ 95/2020 ರ ದಾವೆಯಲ್ಲಿ ನನ್ನ ತಕರಾರಿನಲ್ಲಿ ನಾನು ದಾವಾ ಆಸ್ತಿಯನ್ನು ಸ್ವಚ್ಚಗೊಳಿಸುವಾಗ ತೊಂದರೆ ಕೊಟ್ಟಿರುವುದ್ದಾಗಿ ಹೇಳಿರುತ್ತೇನೆ. ಸದರಿ ದಾವೆಯಲ್ಲಿ ಈ ಪ್ರಕರಣದ 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಯಾವೇಲ್ಲಾ ದಾಖಲೆಗಳನ್ನು ಹಾಜರು ಪಡಿಸಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ದಾವೆಯ ವಾದ ಪತ್ರದಲ್ಲಿ ರತ್ನಮ್ಮನವರ ಗಂಡ ಈ ಪ್ರಕರಣದ 1 ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟು ದಾವಾ ಆಸ್ತಿಯ ಸ್ವಾಧೀನವನ್ನು 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುವ ವಿಚಾರವನ್ನು ಹೇಳಿರುವುದನ್ನು ನಾನು ತಿಳಿದುಕೊಂಡಿರುವುದಿಲ್ಲ. 1 ನೇ ಪ್ರತಿವಾದಿಯು ಕ್ರಯದ ಕರಾರು ಪತ್ರದಂತೆ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭದಲ್ಲಿ ಇರುವ ವಿಚಾರ ನಮಗೆ ಗೊತ್ತಿದ್ದರು ಸಹಾ 1 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಮತ್ತು ರತ್ನಮ್ಮ ನಿಪಿ.1 ರಂತೆ ಕ್ರಯ ಪತ್ರವನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯಲ್ಲಿ ಮನೆ ನಿರ್ಮಿಸಲು ಪರವಾನಗೆಯನ್ನು ಪಡೆದು ಸಂಬಂಧ ಪಟ್ಟ ಕಛೇರಿಗೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಈಗ ಅದು ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕ್ರಯಕ್ಕೆ ಪಡೆಯುವ ಮುಂಚೆ ದಾವಾ ಆಸ್ತಿಯನ್ನು ಅಳತೆ ಮಾಡಿಸಿದ್ದೇವೆ. ಅಳತೆ ಮಾಡಿಸುವ ಸಂಬಂಧ

ದಾಖಲೆಯನ್ನು ಸಂಬಂಧಪಟ್ಟ ಕಛೇರಿಯಿಂದ ತಂದು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಅದು ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯು ಚಾಲ್ತಿಯಲ್ಲಿ ಇರುವಾಗ ಅಂದರೆ ದಿಃ 06.11.2024 ರಲ್ಲಿ ದಾವಾ ಆಸ್ತಿಯನ್ನು ಅಳತೆ ಮಾಡಿ ಕೊಡಿ ಎಂದು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ನ್ಯಾಯಾಲಯಾದಲ್ಲಿ ಪ್ರಕರಣವು ಚಾಲ್ತಿಯಲ್ಲಿ ಇದ್ದರೂ ಸಹಾ ಯಾವ ಉದ್ದೇಶಕ್ಕಾಗಿ ಅಳತೆ ಮಾಡಿಸಲು ಅರ್ಜಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅಳತೆ ಮಾಡಿಸಲು ಕೊಟ್ಟಿದ್ದಾಗಿ ನುಡಿಯುತ್ತಾರೆ. ನನ್ನ ಅರ್ಜಿಯಲ್ಲಿ ಈದಾವೆಯು ಚಾಲ್ತಿ ಇರುವ ಬಗ್ಗೆ ಹೇಳಿರುವುದಿಲ್ಲ. ಈ ದಾವೆ ಚಾಲ್ತಿ ಇರುವ ಬಗ್ಗೆ ಅರ್ಜಿಯಲ್ಲಿ ಹೇಳಲು ನನಗೆ ಏನು ತೊಂದರೆ ಇರಲಿಲ್ಲ.

4. 2006 ರಲ್ಲಿ ರತ್ನಮ್ಮನವರ ಗಂಡ 1 ನೇ ಪ್ರತಿವಾದಿಯ ಪರವಾಗಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ನೊಂದಾಯಿತವಲ್ಲದ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟು ಅದರ ಸ್ವಾಧೀನವನ್ನು ಸಹಾ 1 ನೇ ಪ್ರತಿವಾದಿಗೆ ವಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ.ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಸ್ವಾಧೀನಾನುಭಕ್ಕೆ ತೊಂದರೆಯನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ಯಾವತ್ತು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭದಲ್ಲಿ ಇರುವುದಿಲ್ಲ, ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯಲ್ಲಿ ನಾನೇ ಸ್ವಾಧೀನಾನುಭದಲ್ಲಿ ಇರುವುದಾಗಿ ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಸಾ**.** ಹೇ**.** ಬೆ**.** ಮಾಡಿಸಲಾಯಿತು**.**

ಓ**.**ಹೇ**.**ಕೇ**.**ಸ**.**ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ